# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

ಎಸ್.ಸಿ. ಸಂಖ್ಯೆ 121/2019

| | | |
|---|---|---|
| ಸಾಕ್ಷಿದಾರರ ಹೆಸರು | : ಮಹೇಶ್ | ಪಿಡಬ್ಲ್ಯೂ ಃ 7 |
| ತಂದೆಯ / ಗಂಡನ ಹೆಸರು | : ಮಾದಯ್ಯ | ಸಿಡಬ್ಲ್ಯೂ ಃ 4 |
| ವಯಸ್ಸು | : 41 ವರ್ಷ | |
| ಉದ್ಯೋಗ | : ಚಾಲಕ | |
| ವಾಸಸ್ಥಳ | : ಬಿ ಎಂ ಸಿ ನಗರ , ಮೇಟಗಳ್ಳಿ | |

**ಸಾಕ್ಷಿಯನ್ನು ಈ ದಿನ ದಿಃ 18.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ

1. ನಾನು ಮೇಲೆ ಹೇಳಿದ ವಿಳಾಸದಲ್ಲಿ ಹಲವು ವರ್ಷಗಳಿಂದ ವಾಸವಿರುತ್ತೇನೆ.

2. ಈ ಪ್ರಕರಣದಲ್ಲಿ ಇರುವ ಚಾಸಾ.2 ರವರ ಪರಿಚಯ ಇರುತ್ತದೆ. ಚಾಸಾ.3 ಮತ್ತು 5 ರವರನ್ನು ನೋಡಿರುತ್ತೇನೆ. ಚಾಸಾ.1 ರವರ ಪರಿಚಯ ಇರುತ್ತದೆ. 2018 ರಲ್ಲಿ ಮೇಟಗಳ್ಳಿಯಲ್ಲಿ ಇರುವ ಕಾವೇರಿನಗರದಲ್ಲಿರುವ ನಾರಾಯಣಸ್ವಾಮಿ ಅವರ ಆಫೀಸ್ ನ ಎದುರುಗಡೆ ರಸ್ತೆಯಲ್ಲಿ ಮಹಜರ್ ಮಾಡುವ ಕಾಲದಲ್ಲಿ ನಾನು ಹಾಜರು ಇದ್ದೆ. ನನ್ನ ಜೊತೆ ಬೇರೆ ವ್ಯಕ್ತಿಗಳು ಇದ್ದರು. ಆದರೆ ಅವರ ಹೆಸರು ತಿಳಿದಿರುವುದಿಲ್ಲ. ಪೊಲೀಸರು ಅಲ್ಲಿ ಚಾಸಾ.2 ರವರ ಮೇಲೆ ಗಲಾಟೆ ಆಗಿರುತ್ತದೆ ಎಂಬ ವಿಚಾರಕ್ಕೆ ಅಲ್ಲಿಗೆ ಬಂದಿದ್ದರು. ಸ್ಥಳದಲ್ಲಿ ರಕ್ತ ಚೆಲ್ಲಿತ್ತು. ಅಲ್ಲಿ ಚಪ್ಪಲಿ, ವಾಚ್ ವಸ್ತುಗಳು ಬಿದ್ದಿದ್ದವು. ಪೊಲೀಸರು ಸ್ಥಳವನ್ನು

ಪರಿಶೀಲಿಸಿ, ಸದರಿ ವಸ್ತುಗಳನ್ನು ಪಡೆದುಕೊಂಡು ಮಹಜರ್ ನ್ನು ಜರುಗಿಸಿರುತ್ತಾರೆ. ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಸದರಿ ಮಹಜರ್ ರಾತ್ರಿ 11.00 ಗಂಟೆಯ ಮೇಲೆ ಆಗಿರುತ್ತದೆ. ಸ್ಥಳದಲ್ಲಿ ಫೋಟೋಗಳನ್ನು ಸಹ ತೆಗೆದಿರುತ್ತಾರೆ.

3. ಸದರಿ ಸ್ಥಳದಲ್ಲಿ ಒಂದು ಆಟೋ ಕೂಡ ಇತ್ತು. ಸದರಿ ಆಟೋದಲ್ಲಿಯೂ ಕೂಡ ರಕ್ತದ ಕಲೆಯಾಗಿದ್ದು, ಪೊಲೀಸರು ಸದರಿ ಆಟೋವನ್ನು ಸಹ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸಾಕ್ಷಿಯೂ ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಸ್ಥಳ ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿಪಿ.3(ಸಿ) ಎಂದು ಗುರುತಿಸಲಾಯಿತು. ಸದರಿ ವಸ್ತುಗಳನ್ನು ಮತ್ತು ಆಟೋವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯೂ ನಿಪಿ.6 ರಿಂದ 8 ರಲ್ಲಿರುವ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ನಿಪಿ.6 ಮತ್ತು 8 ರಲ್ಲಿರುವ ಕಾಣುವ ಆಟೋವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯೂ ಎಂಓ-3 ರಿಂದ 8 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯೂ ಎಂಓ-3 ರಿಂದ 8 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ವಕೀಲರಿಂದಃ**

**(1 ನೇ ಆರೋಪಿಗಳ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ. )**

**ಪಾಟೀ ಸವಾಲುಃ 2 ರಿಂದ 4 ನೇ ಆರೋಪಿ ಪರ ವಕೀಲರಿಂದಃ**

**(2 ರಿಂದ 4 ನೇ ಆರೋಪಿಗಳ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ. )**

<u>ಪಾಟೀ ಸವಾಲುಃ 5 ನೇ ಆರೋಪಿ ಪರ ವಕೀಲರಿಂದಃ</u>

(5 ನೇ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ. )

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು
ಮೈಸೂರು.